**<u>ದಿ : 07-07-2025 ರಂದು ಸಾಕ್ಷಿ ದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ</u>:- <u>ಅರ್ಜಿದಾರರ ಪರ ವಕೀಲರಾದ ಶ್ರೀ ಕೆ.ಕೆ.ಎಸ್ ರವರಿಂದ</u>**

ದಿನಾಂಕ 10-09-2024 ರಂದು ಗಾಯಾಳು ಆದ ಮಲ್ಲಿಕಾ ಪೂಜಾರಿಯವರು ಅಂಗನ್ಯೂನ್ಯತಾ ಪ್ರಮಾಣ ಪತ್ರ ಕೋರಿ ನನ್ನ ಬಳಿ ಬಂದಿದ್ದರು. ಅವರ ದೇಹ ಮತ್ತು ವೈದ್ಯಕೀಯ ದಾಖಲೆಗಳನ್ನು ಪರಿಶೀಲನೆ ಮಾಡಿ ಅಂಗನ್ಯೂನ್ಯತಾ ಪ್ರಮಾಣ ಪತ್ರ ನೀಡಿದ್ದು, ಅದನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಗುರುತಿಸಿದ್ದು, ಅದನ್ನು **ನಿ.ಪಿ - 30** ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು **ನಿ.ಪಿ - 30(ಎ)** ಎಂದು ಗುರುತಿಸಲಾಯಿತು. ಸದರಿ ಗಾಯಾಳುವಿನ ಬಲಕೈಗೆ ಶೇಕಡಾ 26 ರಷ್ಟು ಅಂಗನ್ಯೂನ್ಯತೆ ಆಗಿರುತ್ತದೆ.

ಸದರಿ ಗಾಯಾಳುವಿಗೆ ಅಳವಡಿಸಿರುವ ಸಲಕರಣೆ ಇನ್ನೂ ದೇಹದಲ್ಲಿ ಇದ್ದು, ಅದನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆಯಬೇಕಾಗಿರುತ್ತದೆ.

**<u>ಪಾಟೀ ಸವಾಲು</u> : <u>2ನೇ ಎದುರುದಾರರ ಪರ ವಕೀಲರಾದ ಶ್ರೀ ಟಿ. ಮಲ್ಲಿಕಾರ್ಜುನ ಪುರಾಣಿಕ್ ರವರಿಂದ</u>**

ಗಾಯಾಳುವಿಗೆ ಅಳವಡಿಸಿರುವ ಸಲಕರಣೆ ತೆಗೆಯುವುದನ್ನು ಬಿಟ್ಟು ಇತರೇ ಚಿಕಿತ್ಸೆ ಮುಗಿದಿದೆ ಎಂದರೆ ಸರಿ. ಗಾಯಾಳುವಿಗೆ ಆಗಿದ್ದ ಮೂಳೆ ಮುರಿತವು ಈಗ ಸರಿಯಾಗಿ ಕೂಡಿಕೊಂಡಿದೆ ಎಂದರೆ ಸರಿ. ಆದರೆ ಆತನ ಮಾಂಸಖಂಡಗಳು ಮತ್ತು ನರ ನ್ಯೂನ್ಯತೆಯಿಂದ ಕೂಡಿಕೊಂಡಿರುತ್ತದೆ. ಅರ್ಜಿದಾರರು ಕಚೇರಿಯಲ್ಲಿ ಕುಳಿತು ಕಂಪ್ಯೂಟರ್ ಕೆಲಸ ಮಾಡಬಹುದು

ಎಂದರೆ ಆಕೆಯ ಬಲಕೈನ ಧೃಢತೆ ಕಡಿಮೆಯಾಗಿರುವುದರಿಂದ ಪರಿಪೂರ್ಣದಿಂದ ಕೆಲಸ ಮಾಡಲು ಆಗುವುದಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಸಲಕರಣೆಯನ್ನು ತೆಗೆಯಲು ರೂ.45,000/- ಖರ್ಚಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ - 30ರಲ್ಲಿ ಹೇಳಿದಷ್ಟು ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಶೇಕಡಾ 26ರಷ್ಟು ಅಂಗನ್ಯೂನ್ಯತೆ ಆಗದೇ ಇದ್ದರೂ ಸಹ ಆತನ ಮಾತು ಕೇಳಿ ಹೆಚ್ಚಿನ ಪರಿಹಾರ ದೊರೆಯಲಿ ಎಂದು ಹೆಚ್ಚಿನ ಪ್ರಮಾಣದ ಅಂಗನ್ಯೂನ್ಯತೆ ಕಾಣಿಸಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ</u> **<u>ಸವಾಲು</u> : 1ನೇ ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ 1ನೇ ಎದುರುದಾರನ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆ</u> : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**